## **ಕರ್ನಾಟಕ ವಿಧಾನ ಪರಿಷತ್ತು**

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 528 |
| ಮಾನ್ಯ ಸದಸ್ಯರ ಹೆಸರು | ಶ್ರೀ ಸುನೀಲ್ ವಲ್ಯಾಪುರ್ (ವಿಧಾನಸಭಾ ಕ್ಷೇತ್ರ) |
| ಉತ್ತರಿಸುವ ಸಚಿವರು | ಮಾನ್ಯ ಅಬಕಾರಿ ಸಚಿವರು |
| ಉತ್ತರಿಸುವ ದಿನಾಂಕ | 11.12.2025 |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕಲಬುರಗಿ, ವಿಜಯಪುರ ಹಾಗೂ ಬೀದರ್ ಜಿಲ್ಲೆಗಳ ಗಡಿಗಳಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮಗಳೇನು; (ವಿವರವಾದ ಮಾಹಿತಿ ನೀಡುವುದು) | ಕಲಬುರಗಿ, ವಿಜಯಪುರ ಹಾಗೂ ಬೀದರ್ ಜಿಲ್ಲೆಗಳ ಗಡಿಗಳಲ್ಲಿ ಕೆಲವು ವ್ಯಕ್ತಿಗಳು ಸ್ವಲಾಭಕ್ಕಾಗಿ ಅಕ್ರಮ ಮದ್ಯ ಮಾರಾಟ ಮಾಡುವ ಪ್ರಕರಣಗಳು ಗಮನಕ್ಕೆ ಬಂದಿರುತ್ತವೆ.<br><br>ಅಕ್ರಮ ಮದ್ಯ ಮಾರಾಟವನ್ನು ತಡೆಗಟ್ಟಲು ಅಬಕಾರಿ ಇಲಾಖೆಯಿಂದ ವಲಯ ವ್ಯಾಪ್ತಿಯ ರೂಟ್‌ಗಳಲ್ಲಿ ನಿರಂತರವಾಗಿ ಗಸ್ತು ನಡೆಸಲಾಗುತ್ತಿದೆ. ಸದರಿ ಗಸ್ತಿನ ಸಮಯದಲ್ಲಿ ಮತ್ತು ದೂರು ಸ್ವೀಕೃತವಾದಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿರುವ ಸ್ಥಳಗಳ ಮೇಲೆ ದಾಳಿ ನಡೆಸಿ, ಅಕ್ರಮಗಳು ಕಂಡುಬಂದಲ್ಲಿ ಅಬಕಾರಿ ಕಾಯ್ದೆ ಮತ್ತು ನಿಯಮಗಳನುಸಾರ ಪ್ರಕರಣಗಳನ್ನು ದಾಖಲಿಸಲಾಗುತ್ತಿದೆ.<br><br>ರಾಷ್ಟ್ರೀಯ ಮತ್ತು ರಾಜ್ಯ ಹೆದ್ದಾರಿಗಳಲ್ಲಿ ನಿಯಮಿತವಾಗಿ ರಸ್ತೆಗಾವಲು ನಡೆಸಿ ಸಂಶಯಾಸ್ಪದ ವಾಹನಗಳನ್ನು ತಪಾಸಣೆಗೆ ಒಳಪಡಿಸಲಾಗುತ್ತಿದೆ. ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸ್ಥಾಯಿ ಸಮಿತಿ ಸಭೆಯನ್ನು ಏರ್ಪಡಿಸಿ ಇತರೆ ಇಲಾಖೆಗಳೊಂದಿಗೆ ಸಮನ್ವಯ ಸಾಧಿಸಿ ಅಕ್ರಮ ಹತ್ತಿಕಲು ಕ್ರಮವಹಿಸುವ ಕುರಿತು ಪೊಲೀಸ್ ವರಿಷ್ಠಾಧಿಕಾರಿಗಳು ಮತ್ತು ಜಿಲ್ಲಾ ಅರಣ್ಯ |

| | | |
|---|---|---|
| | | ಸಂರಕ್ಷಣಾಧಿಕಾರಿಗಳೊಂದಿಗೆ ಜಂಟಿ ಕಾರ್ಯಾಚರಣೆ ನಡೆಸಲಾಗುತ್ತಿದೆ. ಕರ್ನಾಟಕ ಅಬಕಾರಿ ಕಾಯ್ದೆ 1965 ರ ಕಲಂ 50ರಂತೆ ಕಾರ್ಯವ್ಯಾಪ್ತಿಯಲ್ಲಿ ನಡೆಯುವ ಅಬಕಾರಿ ಅಕ್ರಮಗಳ ಕುರಿತು ಮಾಹಿತಿ ನೀಡಲು ತಿಳುವಳಿಕೆ ಪತ್ರ ಜಾರಿಗೊಳಿಸಲಾಗಿರುತ್ತದೆ. |
| ಆ) | ಈ ಜಿಲ್ಲೆಗಳಲ್ಲಿ ಮದ್ಯ ಮಾರಾಟ ಲೈಸನ್ಸ್ ಇರುವ ಅಂಗಡಿಗಳಲ್ಲೂ ಅಕ್ರಮವಾಗಿ ಮಾರಾಟ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಬಂದಿದ್ದಲ್ಲಿ, ಸರ್ಕಾರ ತೆಗೆದುಕೊಂಡ ಕ್ರಮವೇನು: | ಕಲಬುರಗಿ,ವಿಜಯಪುರ ಹಾಗೂ ಬೀದರ್ ಜಿಲ್ಲೆಗಳಲ್ಲಿನ ಸನ್ನದುದಾರರು ಕೆ.ಎಸ್.ಬಿ.ಸಿ.ಎಲ್ ಡಿಪೋದಿಂದ ಸರ್ಕಾರಕ್ಕೆ ಶುಲ್ಕ ಪಾವತಿಸಿರುವ ಮದ್ಯ ಖರೀದಿಸಿ ಮದ್ಯ ವಹಿವಾಟು ನಡೆಸುತ್ತಿರುತ್ತಾರೆ. ಇಲಾಖಾ ಅಧಿಕಾರಿಗಳು ನಿಯಮಿತವಾಗಿ ಸನ್ನದುಗಳಿಗೆ ಭೇಟಿ ನೀಡಿ ಸನ್ನದುಗಳನ್ನು ತಪಾಸಣೆ ನಡೆಸುತ್ತಿದ್ದು ಯಾವುದೇ ರೀತಿಯ ಶುಲ್ಕ ರಹಿತ ಮದ್ಯ ಮಾರಾಟ ಮಾಡುತ್ತಿರುವುದು ಕಂಡುಬಂದಿರುವುದಿಲ್ಲ.<br><br>ಆದಾಗ್ಯೂ ಸನ್ನದು ಷರತ್ತು ಉಲ್ಲಂಘನೆಗಳಿಗೆ ಕಳೆದ ಮೂರು ವರ್ಷಗಳಲ್ಲಿ ಒಟ್ಟು 2151 ಪ್ರಕರಣಗಳನ್ನು ದಾಖಲಿಸಲಾಗಿದ್ದು, ಸದರಿ ಪ್ರಕರಣಗಳು ದಂಡ ವಿಧಿಸಿ ಇತ್ಯರ್ಥಪಡಿಸಬಹುದಾದ ಪ್ರಕರಣಗಳಾಗಿರುತ್ತವೆ. |
| ಇ) | ಈ ಜಿಲ್ಲೆಗಳಲ್ಲಿ ಸಿಎಲ್-2, ಸಿಎಲ್-4, ಸಿಎಲ್-7, ಸಿಎಲ್-9, ಸಿಎಲ್11ಸಿ ಮದ್ಯ ಮಾರಾಟದ ಅಂಗಡಿಗಳು ಎಷ್ಟು ಇವೆ; (ತಾಲ್ಲೂಕುವಾರು ಮಾಹಿತಿ ನೀಡುವುದು) | ಕಲಬುರಗಿ, ವಿಜಯಪುರ ಹಾಗೂ ಬೀದರ್ ಜಿಲ್ಲೆಗಳಲ್ಲಿನ ಸಿಎಲ್-2, ಸಿಎಲ್-4, ಸಿಎಲ್-7, ಸಿಎಲ್-9, ಸಿಎಲ್-11ಸಿ ಮದ್ಯ ಮಾರಾಟದ ಒಟ್ಟು 812 ಸನ್ನದುಗಳು ಇರುತ್ತವೆ. ವಲಯ/ತಾಲ್ಲೂಕುವಾರು ಮಾಹಿತಿಯನ್ನು **ಅನುಬಂಧ-1**ರಲ್ಲಿ ನೀಡಲಾಗಿದೆ. |
| ಈ) | ಇಂತಹ ಮದ್ಯ ಮಾರಾಟದ ಅಂಗಡಿಗಳಿಗೆ ವಿಧಿಸಿರುವ ದಂಡ ಎಷ್ಟು?(ವಿವರವಾದ ಮಾಹಿತಿ ನೀಡುವುದು) | ಕಲಬುರಗಿ,ವಿಜಯಪುರ ಹಾಗೂ ಬೀದರ್ ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಮದ್ಯ ಮಾರಾಟ ಸನ್ನದುಗಳಲ್ಲಿ ಸನ್ನದು ತಪಾಸಣೆ ವೇಳೆ ಕಂಡುಬಂದ ನ್ಯೂನ್ಯತೆ ಮೇರೆಗೆ ಸನ್ನದು ಷರತ್ತು ಉಲ್ಲಂಘನೆ ಪ್ರಕರಣಗಳನ್ನು ದಾಖಲಿಸಿ ಇಲಾಖಾ |

| | | |
|---|---|---|
| | | ವತಿಯಿಂದ ಸೂಕ್ತ ದಂಡವನ್ನು ವಿಧಿಸಲಾಗಿರುತ್ತದೆ.<br><br>ಕಳೆದ ಮೂರು ವರ್ಷಗಳಲ್ಲಿ ಮೇಲ್ಕಂಡ ಜಿಲ್ಲೆಗಳಲ್ಲಿ 2151 ಸನ್ನದು ಷರತ್ತು ಉಲ್ಲಂಘನೆ ಪ್ರಕರಣಗಳು ದಾಖಲಾಗಿರುತ್ತವೆ. ಸದರಿ ಷರತ್ತು ಉಲ್ಲಂಘನೆ ಪ್ರಕರಣಗಳಿಂದ ರೂ.268.37 ಮೊತ್ತದ ದಂಡವನ್ನು ವಿಧಿಸಲಾಗಿರುತ್ತದೆ. ಜಿಲ್ಲಾವಾರು ವಿವರವನ್ನು **ಅನುಬಂಧ-2**ರಲ್ಲಿ ನೀಡಲಾಗಿದೆ. |

ಆಇ 98 ಇಎಲ್‌ಕ್ಯೂ 2025

**(ಆರ್.ಬಿ.ತಿಮ್ಮಾಪುರ)**
**ಅಬಕಾರಿ ಸಚಿವರು**

<u>ಅನುಬಂಧ-1</u>

**2025-26 ನೇ ಸಾಲಿನಲ್ಲಿ ಕಲಬುರಗಿ, ವಿಜಯಪುರ ಹಾಗೂ ಬೀದರ್ ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಮದ್ಯ ಮಾರಾಟ ಸನ್ನದುಗಳ ವಿವರ.**

| ಕ್ರ ಸಂ | ಜಿಲ್ಲೆಯ ಹೆಸರು | ವಲಯ/ ತಾಲ್ಲೂಕು | ಜಿಲ್ಲೆಗಳಲ್ಲಿರುವ ಸನ್ನದುಗಳ ಸಂಖ್ಯೆ | | | | | | | | | | |
|---|---|---|---|---|---|---|---|---|---|---|---|---|---|
| | | | ಸಿ.ಎಲ್-2 | ಸಿ.ಎಲ್-4 | ಸಿ.ಎಲ್-7 | ಸಿ.ಎಲ್-7 (A) Form-14 | ಸಿ.ಎಲ್-9 | ಸಿ.ಎಲ್-11ಸಿ | ಸಿ.ಎಲ್-8 | ಸಿ.ಎಲ್-15 | Attached RVB | ವೈನ್ ಟವರಿನ್/ ಬೋಟಿಕ್ | ಒಟ್ಟು |
| 1 | ಕಲಬುರಗಿ | ವಲಯ ನಂ.1 | 28 | 4 | 21 | 0 | 14 | 4 | 0 | 0 | 0 | 0 | 71 |
| | | ವಲಯ ನಂ.2 | 34 | 3 | 24 | 0 | 19 | 11 | 0 | 0 | 0 | 0 | 91 |
| | | ಆಳಂದ | 17 | 0 | 16 | 0 | 3 | 11 | 0 | 0 | 0 | 0 | 47 |
| | | ಜೇವರ್ಗಿ | 12 | 3 | 8 | 0 | 2 | 6 | 0 | 0 | 0 | 0 | 31 |
| | | ಚಿತ್ತಾಪುರ | 16 | 0 | 16 | 0 | 10 | 8 | 0 | 0 | 0 | 0 | 50 |
| | | ಸೇಡಂ | 9 | 1 | 4 | 0 | 4 | 5 | 0 | 0 | 0 | 0 | 23 |
| | | ಚಿಂಚೋಳಿ | 15 | 0 | 8 | 0 | 0 | 6 | 0 | 0 | 0 | 0 | 29 |
| **ಒಟ್ಟು** | | | **131** | **11** | **97** | **0** | **52** | **51** | **0** | **0** | **0** | **0** | **342** |
| 2 | ವಿಜಯಪುರ | ವಿಜಯಪುರ | 40 | 26 | 21 | 0 | 28 | 12 | 1 | 1 | 0 | 4 | 133 |
| | | ಬ.ಬಾಗೇವಾಡಿ | 12 | 4 | 11 | 0 | 4 | 9 | 0 | 0 | 0 | 0 | 40 |
| | | ಇಂಡಿ | 14 | 1 | 9 | 0 | 2 | 10 | 0 | 0 | 0 | 0 | 36 |
| | | ಮುದ್ದೇಬಿಹಾಳ | 11 | 1 | 4 | 0 | 4 | 6 | 0 | 0 | 0 | 1 | 27 |
| | | ಸಿಂದಗಿ | 14 | 2 | 11 | 0 | 4 | 7 | 0 | 0 | 0 | 1 | 39 |
| **ಒಟ್ಟು** | | | **91** | **34** | **56** | **0** | **42** | **44** | **1** | **1** | **0** | **6** | **275** |
| 3 | ಬೀದರ್ | ಬೀದರ | 27 | 1 | 20 | 1 | 14 | 10 | 2 | 0 | 1 | 0 | 76 |
| | | ಭಾಲ್ಕಿ | 13 | 0 | 03 | 0 | 02 | 04 | 0 | 0 | 0 | 0 | 22 |
| | | ಬಸವಕಲ್ಯಾಣ | 12 | 0 | 07 | 0 | 07 | 07 | 0 | 0 | 0 | 0 | 33 |
| | | ಹುಮನಾಬಾದ್ | 17 | 1 | 14 | 0 | 05 | 05 | 0 | 0 | 0 | 0 | 42 |
| | | ಔರಾದ್ | 08 | 0 | 05 | 0 | 03 | 06 | 0 | 0 | 0 | 0 | 22 |
| **ಒಟ್ಟು** | | | **77** | **2** | **49** | **1** | **31** | **32** | **2** | **0** | **1** | **0** | **195** |
| **ಒಟ್ಟು** | | | **299** | **47** | **202** | **1** | **125** | **127** | **3** | **1** | **1** | **6** | **812** |

ಆಇ 98 ಇಎಲ್‌ಕ್ಯೂ 2025

## ಅನುಬಂಧ-2

### ಕಳೆದ ಮೂರು ವರ್ಷಗಳಲ್ಲಿ ಕಲಬುರಗಿ, ವಿಜಯಪುರ ಹಾಗೂ ಬೀದರ್ ಜಿಲ್ಲೆಗಳಲ್ಲಿ ಮದ್ಯ ಮಾರಾಟ ಸನ್ನದುಗಳ ವಿರುದ್ಧ ದಾಖಲಿಸಿರುವ ಸನ್ನದು ಷರತ್ತು ಉಲ್ಲಂಘನೆ ಪ್ರಕರಣಗಳು ಹಾಗೂ ವಿಧಿಸಿದ ದಂಡದ ವಿವರ

| ಜಿಲ್ಲೆ | ಅಬಕಾರಿ ವರ್ಷ (ಜುಲೈ ನಿಂದ ಜೂನ್ ವರೆಗೆ) | ದಾಖಲಿಸಲಾದ ಪ್ರಕರಣಗಳ ಸಂಖ್ಯೆ | ವಿಧಿಸಿದ ದಂಡದ ಮೊತ್ತ ಲಕ್ಷ ರೂ.ಗಳಲ್ಲಿ |
|---|---|---|---|
| ಕಲಬುರಗಿ | 2023-24 | 491 | 69.90 |
| | 2024-25 | 358 | 31.63 |
| | 2025 -26 (ಅಕ್ಟೋಬರ್ 31.10.2025 ರವರೆಗೆ) | 138 | 4.65 |
| **ಒಟ್ಟು** | | **987** | **106.18** |
| ವಿಜಯಪುರ | 2023-24 | 259 | 46 |
| | 2024-25 | 230 | 31.29 |
| | 2025 -26 (ಅಕ್ಟೋಬರ್ 31.10.2025 ರವರೆಗೆ) | 65 | 0.99 |
| **ಒಟ್ಟು** | | **554** | **78.28** |
| ಬೀದರ್ | 2023-24 | 264 | 45.01 |
| | 2024-25 | 246 | 38.21 |
| | 2025 -26 (ಅಕ್ಟೋಬರ್ 31.10.2025 ರವರೆಗೆ) | 100 | 0.69 |
| **ಒಟ್ಟು** | | **610** | **83.91** |
| **ಒಟ್ಟು** | | **2151** | **268.37** |

ಆಇ 98 ಇಎಲ್‌ಕ್ಯೂ 2025